# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 5/2023

P.W: 4
C.W: 6

**ದಿನಾಂಕ 23.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ನಗೀನಾ

**ಗಂಡನ ಹೆಸರು :** ನದೀಮ್ ಪಾಷ

**ವಯಸ್ಸು** : 28 ವರ್ಷ

**ವೃತ್ತಿ** : ಬೀಡಿ ಕಟ್ಟುವ ಕೆಲಸ

**ವಾಸಸ್ಥಳ** : ಶಿರಾ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಭಸಲಾಯಿತು.**

1. ಚಾ.ಸಾ.1 ರಿಂದ 4 ರವರು ಗೊತ್ತು. ನಾನು ಅವರನ್ನು ನೋಡಿದ್ದೇನೆ. ಆರೋಪಿ ನನ್ನ ಮನೆಯ ಬಳಿಯಲ್ಲಿ ವಾಸವಾಗಿದ್ದರು. ನಾನು ಆತನನ್ನು ನೋಡಿದ್ದೇನೆ. ಆತನ ಪತ್ನಿಯ ಹೆಸರು ಸಾಧಿಯಾ. ಆಕೆ ರಾಗ ಜೀವಂತ ಇರುವುದಿಲ್ಲ. 2 ವರ್ಷ ದ ಹಿಂದೆ ಮೃತರಾಗಿರುತ್ತಾಳೆ.

ನಾನು ಮತ್ತು ನನ್ನ ಕುಟುಂಬದವರು, ಆರೋಪಿ ಮತ್ತು ಆತನ ಪತ್ನಿ, ಪ್ರತ್ಯೇಕವಾಗಿ ಶೀನಣ್ಣನವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಆರೋಪಿಯ ತಾಯಿ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ. ಆರೋಪಿ ಮತ್ತು ಆತನ ಪತ್ನಿಗೆ ಒಂದು ಗಂಡು ಮಗು ಇತ್ತು. ಅವರಿಬ್ಬರು ಚೆನ್ನಾಗಿದ್ದರು. ಆರೋಪಿ ಪತ್ನಿ ಮೃತರಾಗುವ ವೇಳೆ ಗಂಡು ಮಗುವಿಗೆ 2 ವರ್ಷ ಆಗಿತ್ತು, ಆರೋಪಿ ಏನು ಕೆಲಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಆರೋಪಿ ಪತ್ನಿ ನನ್ನೊಂದಿಗೆ ಬೀಡಿ ಕಟ್ಟುತ್ತಿದ್ದರು. ಒಂದು ಬಾರಿ ಆರೋಪಿ ಮತ್ತು ಆತನ ಪತ್ನಿ ಗಲಾಟೆ ಮಾಡಿಕೊಂಡಿದ್ದನ್ನು ನಾನು ನೋಡಿದ್ದೇನೆ, ಯಾವ ಕಾರಣಕ್ಕೆ ಜಗಳ ಮಾಡಿಕೊಂಡಿದ್ದರು ನನಗೆ ಗೊತ್ತಿಲ್ಲ. ಮೃತಳು ಯಾವ ಕಾರಣಕ್ಕೆ ಮೃತರಾಗಿದ್ದರು ನನಗೆ ಗೊತ್ತಿಲ್ಲ. ಆರೋಪಿಯ ಮನೆಯಲ್ಲಿ ಮೃತಳ ಕಡೆಯವರು ಬಂದು ರಾತ್ರಿ 12.00 ಗಂಟೆಯಲ್ಲಿ ಗಲಾಟೆ ಮಾಡುತ್ತಿದ್ದಾಗ ನನಗೆ ಆಕೆ ಮೃತಳಾಗಿರುವ ವಿಚಾರ ತಿಳಿಯಿತು. ಮೃತಳು ತೀರಿಕೊಂಡಿದ್ದ ಕಾರಣ ಅದೇ ಕಾರಣಕ್ಕೆ ಗಲಾಟೆ ಆಗಿತ್ತು. ಮೃತ ದೇಹ ಇದ್ದ ಸ್ಥಳದಲ್ಲಿ ಸೇರಿದ್ದ ಜನರು ಆರೋಪಿ ಮೃತಳನ್ನು ಕೊಲೆ ಮಾಡಿರುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಮೃತಳ ಕತ್ತಿನಲ್ಲಿ ನಿಶಾನೆ ಇದ್ದ ಕಾರಣ ಆರೋಪಿ ಆಕೆಯನ್ನು ಕೊಲೆ ಮಾಡಿರುತ್ತಾನೆ ಎಂದು ಜನ ಮಾತನಾಡಿಕೊಂಡಾಗ ಆಗ ನನಗೆ ಸಾವಿನ ಕಾರಣ ತಿಳಿಯಿತು. ಮೃತ ದೇಹವನ್ನು ಆರೋಪಿಯ ಮನೆಯಿಂದ ಆರೋಪಿಯ ತಾಯಿಯ

ಮನೆಗೆ ತೆಗೆದುಕೊಂಡು ಹೋದರು. ಆಕೆ ಮೃತಳಾದಾಗ ಗರ್ಭವತಿಯಾಗಿದ್ದಳು. ಮೃತಳ ಅತ್ತೆ ಮನೆಗೆ ಮೃತ ದೇಹ ಹೋದ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯ ಬಳಿ ವಾಸವಾಗಿದ್ದ ಜಬೀಉಲ್ಲಾ ರವರನ್ನು ನಾನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಸಿ.ಡಿ.ಸಿ. ವಕೀಲರಿಂದ**

ಆರೋಪಿ ಪರ ವಕೀಲರು ಕಲಂ. 231 (2) ಸಿ.ಆರ್.ಪಿ.ಸಿ ಅನ್ವಯ ಅರ್ಜಿ ಸಲ್ಲಿಸಿ ಚಾ.ಸಾ.1 ರಿಂದ 10 ರವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ನುಡಿದು ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.